**ಓ. ಎಸ್.ನಂ. 134/2019**

**ಪಿ. ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ: 01-03-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ವಾದಿಯ ಮುಖ್ಯ ವಿಚಾರಣೆ: ಶ್ರೀ ಎ ಮೂಕಪ್ಪ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು ಸದರಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿ ಬರೆಯಿಸಿದ್ದು ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನಗೆ ಗೊತ್ತು ಮತ್ತು ಅದರಲ್ಲಿರುವ ಸಹಿಗಳು ನನ್ನದಾಗಿವೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿದ್ದು ದಾವಾ ಆಸ್ತಿ ಕುರಿತು ಪ್ರತಿವಾದಿ ನನ್ನ ಹೆಸರಿಗೆ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದು ಅದನ್ನು ನಿಪಿ: **1** ಎಂದು ಗುರುತಿಸಲಾಯಿತು. ಪ್ರತಿವಾದಿಯ ಸಹಿಯನ್ನು ನಿಪಿ: **1 (ಎ)** ಎಂದು, ನನ್ನ ಸಹಿಯನ್ನು ನಿಪಿ: **1 (ಬಿ)** ಅಂತಾ ಗುರುತಿಸಲಾಯಿತು. ಪ್ರತಿವಾದಿಯ ಮಗನಾದ ರಾಘವೇಂದ್ರ ಸಹ ಸಹಿ ಹಾಕಿದ್ದು ಆತನ ಸಹಿಯನ್ನು ನಿಪಿ: **1 (ಸಿ)** ಅಂತಾ ಗುರುತಿಸಲಾಯಿತು. ಮತ್ತೊಬ್ಬ ಸಾಕ್ಷಿದಾರರಾದ ಹುಲುಗಪ್ಪ ಇವರು ಸಹಿ ಹಾಕಿದ್ದು ಅವರ ಸಹಿಯನ್ನು ನಿಪಿ: **1 (ಡಿ)** ಅಂತಾ ಗುರುತಿಸಲಾಯಿತು. ನಿಪಿ: **1** ನ್ನು ಅಲ್ತಾಫ್ ದಸ್ತುಬರಹಗಾರ ಬರೆದಿರುತ್ತಾರೆ.

ಪ್ರತಿವಾದಿಯು ನೋಂದ ಖರೀದಿ ಪತ್ರ ಬರೆದುಕೊಡಲು ಸಮಯಾವಕಾಶ ಕೇಳಿದ್ದರಿಂದ ಪ್ರತಿವಾದಿ ಮತ್ತೊಂದು ಅವಧಿ ವಿಸ್ತರಣಾ ಪತ್ರವನ್ನು ಬರೆದುಕೊಟ್ಟಿದ್ದು ಅದನ್ನು ನಿಪಿ: **2** ಎಂದು ಗುರುತಿಸಲಾಯಿತು. ಅದಕ್ಕೆ ಪ್ರತಿವಾದಿ ಸಹಿ ಹಾಕಿದ್ದು ಅವರ ಸಹಿಯನ್ನು ನಿಪಿ: **2 (ಎ)** ಎಂದು, ನನ್ನ ಸಹಿಯನ್ನು ನಿಪಿ: **2 (ಬಿ)** ಎಂದು ಗುರುತಿಸಲಾಯಿತು.

**ಓ. ಎಸ್.ನಂ. 134/2019**
**ಪಿ. ಡಬ್ಲ್ಯೂ: 1**

ಅದಕ್ಕೆ ಸಾಕ್ಷಿದಾರರಾಗಿ ಮಹಾದೇವ ಅಂತಾ ಸಹಿ ಹಾಕಿದ್ದು ಅವರ ಸಹಿಯನ್ನು ನಿಪಿಃ **2 (ಸಿ)** ಎಂದು ಗುರುತಿಸಲಾಯಿತು. ನಿಪಿಃ **2** ನ್ನು ಕೆ ಹೆಚ್ ವೇದ ಮೂರ್ತಿ ದಸ್ತುಬರಹಗಾರು ಬರೆದಿರುತ್ತಾರೆ.

ಪ್ರತಿವಾದಿಗೆ ದಿಃ **06-03-2019** ರಂದು ನೀಡಿದ ನೋಟಿಸ್ ನ ಕಚೇರಿ ಪ್ರತಿಯನ್ನು ನಿಪಿಃ **3** ಎಂದು, ಅಂಚೆ ರಸೀದಿಯನ್ನು ನಿಪಿಃ **4** ಎಂದು, ಅಂಚೆ ಸ್ವೀಕೃತಿಯನ್ನು ನಿಪಿಃ **5** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗಾಗಿ ಸಮಯಾವಕಾಶವನ್ನು ಕೇಳಿದ್ದು ನ್ಯಾಯದಾನದ ದೃಷ್ಟಿಯಿಂದ ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.